# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>

## <u>ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ 7/2020</u>

ಫ್ರಾಸಾ–10

ಚಾಸಾ–02

[ Addl. Charge sheet witness]

| | | |
|---|---|---|
| ಸಾಕ್ಷಿಯ ಹೆಸರು | – | ರಂಗನಾಥ ಕಮತರ |
| ತಂದೆ ಹೆಸರು | – | ಫಕ್ಕೀರಪ್ಪ |
| ವಯಸ್ಸು | – | 34 ವರ್ಷ |
| ಉದ್ಯೋಗ | – | ಕೂಲಿ ಕೆಲಸ |
| ವಾಸಸ್ಥಳ | – | ನವನಗರ , ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | – | 03-06-2024 |

**<u>ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>**

ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಶಾನೆ ಪಿ– 75 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ–75 (ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಫೋಟೊಗಳಲ್ಲಿ ನಾನು ಕಂಡುಬರುತ್ತೇನೆ. ಸದರಿ ಫೋಟೊಗಳನ್ನು ನಿಶಾನೆ ಪಿ– 76 ಮತ್ತು 77 ಎಂದು ಗುರುತಿಸಲಾಯಿತು. ಈಗ 2 ವರ್ಷದ ಹಿಂದೆ ರಸ್ತೆಯಲ್ಲಿ ಸದರಿ ಫೋಟೊ ತೆಗೆದಿದ್ದಾರೆ. ಯಾವ ಕಾರಣಕ್ಕಾಗಿ ಫೋಟೊ ತೆಗೆದಿದ್ದಾರೆಂದು ನನಗೆ ಗೊತ್ತಿಲ್ಲ. ಫೋಟೊದಲ್ಲಿರುವ ವ್ಯಕ್ತಿಗಳನ್ನು ಗುರುತಿಸಲಾಗುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ –1 ಮತ್ತು 2 ರವರನ್ನು ಗುರುತಿಸಲಾಗುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀಸವಾಲು ಸರ್ಕಾರಿ ಅಭಿಯೋಜಕರಿಂದಃ**

2. ದಿಃ 25-12-2020 ರಂದು ಬೆಳಿಗ್ಗೆ 11 ಘಂಟೆ ಸುಮಾರಿಗೆ ಪೊಲೀಸರು ನನ್ನನ್ನು ಮತ್ತು ಸಾಕ್ಷಿ ಸಂಗಮೇಶ ಸವಡ್ಡಿ ರವರನ್ನು ಠಾಣೆಗೆ ಕರೆಸಿದ್ದು 4 ನೇ ಆರೋಪಿ ಚಂದ್ರಕಾಂತ ರವರು ತೋರಿಸಿದಂತೆ ಬಾಗಲಕೋಟೆ ಹೊರವಲಯದಲ್ಲಿರುವ ಗುಲಬರ್ಗಾ ಬೆಂಗಳೂರು ರಸ್ತೆಯ ಹತ್ತಿರ ಅಮಿನಗಡಕ್ಕೆ ಹೋಗುವ ರಸ್ತೆ ಮೇಲೆ ನಮ್ಮನ್ನು ಕರೆದುಕೊಂಡು ಹೋಗಿ ಆರೋಪಿ -4 ರವರು ತೋರಿಸಿದ ಸ್ಥಳದಲ್ಲಿ ನಿಶಾನೆ ಪಿ-75 ರಂತೆ ಪಂಚನಾಮೆ ಬರೆದಿದ್ದಾರೆ ಮತ್ತು ಫೋಟೊ ತೆಗೆದಿದ್ದಾರೆ ಅಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀಸವಾಲು ಆರೋಪಿತರ ಪರವಾಗಿ ವಕೀಲರಿಂದಃ**

ಪಾಟಿ ಸವಾಲು ಇಲ್ಲ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಶ್ರೀಮತಿ ಕೆ.ಜಿ. ಶಾಂತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

**ಎನ್.ಡಿ.ಪಿ.ಎಸ್. ಸಂಖ್ಯೆ: 7/2020**

**ಪ್ರಾಸಾ.10**